## ಖ್ಯಾತನಾಮರನ್ನು ಕಾಡಿದ ಪಾರ್ಕಿನ್‌ಸನ್



ಹಲವಾರು ದಶಕಗಳ ಹಿಂದೆ ಪಾರ್ಕಿನ್ಸನ್ ಎಂಬ ವಿಜ್ಞಾನಿ ಈ ರೋಗದ ಲಕ್ಷಣಗಳನ್ನು ಕಂಡುಹಿಡಿದು ವೈದ್ಯ ಜಗತ್ತಿಗೆ ತೋರಿಸಿಕೊಟ್ಟ. ಇದಕ್ಕೆ 'ನಡುಗುವ ಲಕ್ವ' (shaking palsy) ಎಂದೂ ಹೆಸರಿಟ್ಟದ್ದು ಇದೇ ವಿಜ್ಞಾನಿ.

ಜಗತ್ತಿನ ಹಲವು ಖ್ಯಾತನಾಮರಾದ ಅಮೆರಿಕದ ಖ್ಯಾತ ಗಾಯಕ, ಗೀತರಚನೆಕಾರ ಹಾಗೂ ನಟ ನೀಲ್ ಡೈಮಂಡ್, ಅಮೆರಿಕದ ಮಾಜಿ ಅಧ್ಯಕ್ಷ ಜಾರ್ಜ್ ಬುಷ್, ಅಮೆರಿಕ–ಕೆನಡಾದ ನಟ ಮೈಕಲ್ ಜೆ. ಫಾಕ್ಸ್, ರೋಮ್‌ನ ಬಿಷಪ್ ಪೋಪ್ ಜಾನ್ 2, ಸ್ಕಾಟ್ಲೆಂಡ್‌ನ ಹಾಸ್ಯಗಾರ ಬಿಲ್ಲಿ ಕನ್ನೋಲಿ.. ಅಲ್ಲದೆ ವಿಶ್ವವಿಖ್ಯಾತ ಬಾಕ್ಸಿಂಗ್‌ಪಟು ಅಮೆರಿಕದ ಮೊಹಮ್ಮದ್ ಅಲಿ ಮುಂತಾದವರು ಪಾರ್ಕಿನ್ಸನ್‌ಗೆ ತುತ್ತಾದವರು. ಮೊಹಮ್ಮದ್ ಅಲಿ ಅವರಿಗೆ ಬಾಕ್ಸಿಂಗ್ ಆಡುವಾಗ ತಲೆಯ ಮೇಲೆ ಬಿದ್ದ ಪೆಟ್ಟಿನಿಂದಾಗಿ ಅವರು ಪಾರ್ಕಿನ್ಸನ್‌ಗೆ ಒಳಗಾಗಿದ್ದರು.

ನಿದ್ರೆಯಲ್ಲಿ ಕೂಗುವುದು, ಅರಚುವುದು, ಸೇರಿವೆ. ಈ ಲಕ್ಷಣಗಳಲ್ಲಿ ಕೆಲವು ನಡುಕದಂತಹ ವೈದ್ಯಕೀಯ ಲಕ್ಷಣಗಳು ಕಾಣಿಸುವ 20 ವರ್ಷಗಳ ಮುನ್ನ ಕಂಡುಬರಬಹುದು' ಎಂದು ರೋಗದ ಮುನ್ಸೂಚನೆ ಮೇಲೆ ಬೆಳಕು ಚೆಲ್ಲುತ್ತಾರೆ ಈ ವೈದ್ಯರು.

'ಈ ರೋಗಕ್ಕೆ ನಿಖರವಾದ ಕಾರಣಗಳು ತಿಳಿದಿಲ್ಲವಾದರೂ ಸಮಸ್ಯೆ ಕಾಡುವ ಮುಖ್ಯವಾದ ಭಾಗ ಮೆದುಳು. ಮೆದುಳಿನ ಮೂಲವಾದ 'ಸುಸ್ಟೆನ್ಷಿಯಾ ನಿಗ್ರಾ' ಎಂಬ ಭಾಗದಲ್ಲಿ ಸಮಸ್ಯೆಯ ಮೂಲ ಕಾಣಿಸುತ್ತದೆ. ಈ ಭಾಗದ ನರಗಳು ಮೆದುಳಿನ ಇತರೆ ಭಾಗಕ್ಕೆ ಸಂಪರ್ಕ ಹೊಂದಿದ್ದು, ಇದು ವ್ಯಕ್ತಿಯ ನಡಿಗೆಯನ್ನು ನಿಯಂತ್ರಿಸುತ್ತದೆ' ಎಂದು ಹೇಳುತ್ತಾರೆ ಅವರು.

### ಪತ್ತೆ, ಪರೀಕ್ಷೆ ಹೇಗೆ?

ಪಾರ್ಕಿನ್ಸನ್ ಬಂದಿದೆ ಎಂದು ಶಂಕಿಸಲಾದ ರೋಗಿಗಳಿಗೆ ಡೊಪಮೈನ್ ಇಮೇಜಿಂಗ್ ಎಂಬ ಒಂದು ಪರೀಕ್ಷೆ ಮಾಡಲಾಗುತ್ತದೆ. ಇದರಿಂದ ರೋಗದ ಆರಂಭಿಕ ಹಂತವನ್ನು ಪರಿಣಾಮಕಾರಿ ಪತ್ತೆ ಹಚ್ಚಬಹುದು.

ಸಾಮಾನ್ಯವಾಗಿ ಪಾರ್ಕಿನ್ಸನ್ ಬಂದಿರುವ ರೋಗಿಗಳ ದೇಹದಲ್ಲಿ ಡೊಪಾಮೈನ್ ಎಂಬ ಅಂಶ ಗಮನಾರ್ಹವಾಗಿ ಕಡಿಮೆಯಾಗಿರುತ್ತದೆ. ಔಷಧಿ, ಇಂಜೆಕ್ಷನ್ ಮತ್ತು ಕೆಲವೊಮ್ಮೆ ಶಸ್ತ್ರಚಿಕಿತ್ಸೆ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

### ಅಫೋಮೋರ್ಫಿನ್ ಚುಚ್ಚುಮದ್ದು

ಪಾರ್ಕಿನ್ಸನ್ ಕಾಯಿಲೆಯನ್ನು ಗುಣಪಡಿಸುವ ಸಲುವಾಗಿ ಇಂಗ್ಲೆಂಡ್‌ನ ಬ್ರಿಟಾನಿಯ ಫಾರ್ಮಸುಟಿಕಲ್ಸ್ ಅಫೋಮೋರ್ಫಿನ್ ಎಂಬ ಚುಚ್ಚುಮದ್ದನ್ನು ಬಿಡುಗಡೆ ಮಾಡಿದೆ. ಈ ಔಷಧವನ್ನು ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯಲ್ಲಿ ಪ್ರಥಮ ಬಾರಿಗೆ ಬಿಡುಗಡೆಗೊಳಿಸಲಾಗಿದ್ದು, ದೇಶದ ಎಲ್ಲೆಡೆ ಆಯ್ದ ಕೇಂದ್ರಗಳಲ್ಲಿ ಇದು ಲಭ್ಯ.

ಈ ಚುಚ್ಚುಮದ್ದು ಮೆದುಳಿನ ನರಜೀವಕೋಶಗಳನ್ನು ಉತ್ತೇಜಿಸುತ್ತದೆ. ಒಂದೆರಡು ನಿಮಿಷಗಳ ಒಳಗೆ ಇದು ರೋಗಿಗಳಿಗೆ ಆರಾಮ ನೀಡುತ್ತದೆ. ಈ ಹೊಸ ಔಷಧಕ್ಕೆ ಹೋಲಿಸಿದರೆ ಪಾರ್ಕಿನ್ಸನ್‌ಗೆ ನೀಡುವ ಇತರೆ ಚಿಕಿತ್ಸೆಗಳು ತಮ್ಮ ಪರಿಣಾಮ ತೋರಲು ಕನಿಷ್ಠ 30 ನಿಮಿಷಗಳಿಂದ ಒಂದು ಗಂಟೆ ಸಮಯ ತೆಗೆದುಕೊಳ್ಳುತ್ತವೆ. ಪಾರ್ಕಿನ್ಸನ್ ರೋಗದ ಮಧ್ಯಮ ಹಂತದಲ್ಲಿ ಬಳಲುತ್ತಿರುವ ರೋಗಿಗಳಿಗೆ ನೇರ ಮೆದುಳಿನ ಉತ್ತೇಜನದ ಶಸ್ತ್ರಚಿಕಿತ್ಸೆ ನಡೆಸುವ ಬದಲಿಗೆ ಅಫೋಮೋರ್ಫಿನ್ ಪರಿಣಾಮಕಾರಿ ಔಷಧಿಯಾಗಿದೆ.

'ಕೆಲಸಕ್ಕೆ ಹೋಗುವ ಯುವಜನರಿಗೆ ಈ ಔಷಧ ಹೇಳಿ ಮಾಡಿಸಿದಂತಿದೆ. ಸಮಸ್ಯೆಗೆ ತಕ್ಷಣ ಪರಿಹಾರ ಸಿಗುವುದರಿಂದ ಹಾಗೂ ಅಡ್ಡಪರಿಣಾಮ ಇಲ್ಲದ ಕಾರಣ ಅಫೋಮೋರ್ಫಿನ್ ಬಳಕೆಯನ್ನು ವಿಶ್ವ ಆರೋಗ್ಯ ಸಂಸ್ಥೆಯೂ ಶಿಫಾರಸು ಮಾಡಿದೆ' ಎಂದು ಹೇಳುತ್ತಾರೆ ಲಂಡನ್‌ನ ಇಂಪೀರಿಯಲ್ ಆಸ್ಪತ್ರೆಯಲ್ಲಿ ನರರೋಗ ತಜ್ಞರಾಗಿರುವ ಡಾ. ವಿನೋದ್ ಮೆಟ್ಟ.

ಅಫೋಮೋರ್ಫಿನ್ ಇನ್ಸುಲಿನ್ ಪೆನ್‌ಗಳಂತೆಯೇ ಇದ್ದು, ಬಳಕೆಯೂ ಅದೇ ರೀತಿಯಾಗಿರುತ್ತದೆ. ಒಂದು ಪೆನ್ ಮೂರು ಎಂಎಲ್ ಔಷಧಿ ಹೊಂದಿದ್ದು, ಮೂರು ದಿನಕ್ಕೆ ಸಾಕಾಗುತ್ತದೆ. ದಿನಕ್ಕೆ 6ರಿಂದ ೮ ಬಾರಿ ತೆಗೆದುಕೊಳ್ಳಬೇಕಾಗುತ್ತದೆ. ಬೆಲೆ 2000 ರೂಪಾಯಿ. 'ಪ್ರಸ್ತುತ ಭಾರತದಲ್ಲಿ ಪಾರ್ಕಿನ್ಸನ್ ರೋಗಿಗಳಿಗೆ ಇರುವುದು ಎರಡೇ ಆಯ್ಕೆಗಳು. ರೋಗದ ಆರಂಭದ ಹಂತದಲ್ಲಿ ಬಾಯಿಂದ ಔಷಧ ಸೇವಿಸುವುದು ಅಥವಾ ಉನ್ನತ ಹಂತಗಳಲ್ಲಿ ಅತ್ಯಂತ ದುಬಾರಿಯಾದ ಮೆದುಳಿನ ಶಸ್ತ್ರಚಿಕಿತ್ಸೆಗೆ ಗುರಿಯಾಗುವುದು. ಆದರೆ ರೋಗದ ಮಧ್ಯಮ ಹಂತಗಳಲ್ಲಿ ಯಾವುದೇ ಚಿಕಿತ್ಸೆ ಇರಲಿಲ್ಲ. ಇಂಥ ರೋಗಿಗಳಿಗೆ ಅಫೋಮೋರ್ಫಿನ್ ವರದಾನ' ಎನ್ನುತ್ತಾರೆ ವಿಕ್ರಮ್ ಆಸ್ಪತ್ರೆಯಲ್ಲಿ ಪಾರ್ಕಿನ್ಸನ್ ರೋಗ ತಜ್ಞ ಡಾ. ಪ್ರಶಾಂತ್ ಎಲ್.ಕೆ.

ಪಾರ್ಕಿನ್ಸನ್ ಬರುವ ಬಗ್ಗೆ ಮುನ್ಸೂಚನೆ ಇಲ್ಲದೇ ಇದ್ದರೂ ಬಂದ ಆರಂಭಿಕ ಹಂತದಲ್ಲಿ ಕೆಲ ಪರಿಹಾರೋಪಾಯಗಳು ಪರಿಣಾಮಕಾರಿಯಾಗಬಹುದು. ಸಾತ್ವಿಕ ಆಹಾರ, ಧನಾತ್ಮಕ ಚಿಂತನೆ, ಕಟ್ಟುನಿಟ್ಟಿನ ವ್ಯಾಯಾಮ, ನಡಿಗೆ, ಮಲಗುವ ಮುನ್ನ ಉತ್ತಮ ಸಂಗೀತ ಆಲಿಸುವುದು ಮುಂತಾದವು ರೋಗದ ತೀವ್ರತೆ ಕಡಿಮೆಯಾಗಲು ಸಹಾಯವಾಗಬಹುದು.

